ಹರಪನಹಳ್ಳಿಯಲ್ಲಿ ಅಗ್ನಿಶಾಮಕದಳವನ್ನು ಸ್ಥಾಪಿಸುವ ಬಗ್ಗೆ.

೨೮೪ (೧೦೯) ಶ್ರೀ ಬಿ. ಹೆಚ್. ವೆಂಕಾನಾಯಕ್ (ಹರಪನಹಳ್ಳಿ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿ (ಬಳ್ಳಾರಿಜಿಲ್ಲೆ) ಯಲ್ಲಿ ಅಗ್ನಿಶಾಮಕ ದಳವನ್ನು ಸ್ಥಾಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಆ) ಅದನ್ನು ಸ್ಥಾಪಿಸಲು ೧೯೮೫—೮೬ರ ಆರ್ಥಿಕ ಸಾಲಿನಲ್ಲಿ ಒದಗಿಸಿರುವ ಹಣ ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಅಗ್ನಿ ಶಾಮಕ ಠಾಣೆಗಳನ್ನು ಅಧ್ಯತಾನುಸಾರವಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೊದಲನೆಯ ಹಂತದಲ್ಲಿಯೂ ಮತ್ತು ಉಪವಿಭಾಗ ಕೇಂದ್ರಗಳಲ್ಲಿ ಎರಡನೆಯ ಹಂತದಲ್ಲಿಯೂ ಸ್ಥಾಪಿಸಲಾಗುವುದು. ಮೂರನೆಯ ಹಂತದಲ್ಲಿ ಪಾಲಿ ಇರುವ ಸ್ಥಳೀಯ ಸಂಸ್ಥೆಗಳ ಅಗ್ನಿ ಶಾಮಕ ಠಾಣೆಗಳನ್ನು ಸರ್ಕಾರವು ವಹಿಸಿಕೊಳ್ಳುವುದು. ರಾಜ್ಯದಲ್ಲಿ ಸ್ಥಾಪಿಸಲಾಗುವ ಅಗ್ನಿ ಶಾಮಕ ಠಾಣೆಗಳ ಬಗ್ಗೆ ಇದು ಸರ್ಕಾರದ ಸಾಮಾನ್ಯ ನೀತಿಯಾಗಿದೆ. ಅಗ್ನಿಶಾಮಕ ಠಾಣೆಗಳನ್ನು ಎಲ್ಲೇ ಸ್ಥಾಪಿಸಲಿ ಅವು ಅಲ್ಲಿಂದ ೪೦ ಕಿ. ಮೀ. ಫಾಸಲೆಯಲ್ಲಿ ಬರುವ ಅಗ್ನಿಶಾಮಕ ಕರೆಗಳನ್ನು ನಿರ್ವಹಿಸುತ್ತದೆ. ಒಂದು ಅಗ್ನಿಶಾಮಕ ಠಾಣೆಗೆ ತಗಲುವ ಆನಾ ವರ್ತ ವೆಚ್ಚ ರೂ. ೩೧,೦೦,೦೦೦—೦೦ ಮತ್ತು ಆವರ್ತ ವೆಚ್ಚ ರೂ. ೪,೦೦,೦೦೦—೦೦ ಅಗ್ನಿಶಾಮಕ ಠಾಣೆಗೆ ತಗಲುವ ಭಾರಿ ವೆಚ್ಚದಿಂದ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸಾಧ್ಯವಾಗಿಲ್ಲ.

ಆ) ಈ ಮೇಲೆ ಕಂಡ ಕಾರಣಗಳಿಂದ ಹರಪನಹಳ್ಳಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ೧೯೮೫—೮೬ರ ಆರ್ಥಿಕ ಸಾಲಿನಲ್ಲಿ ಹಣವನ್ನು ಒದಗಿಸಲಾಗಿಲ್ಲ.

ಹರಪನಹಳ್ಳಿಯಲ್ಲಿ ಇರುವ ಆಸ್ಪತ್ರೆಯನ್ನು ವಿಸ್ತರಿಸುವ ಬಗ್ಗೆ.

೨೮೫ (೧೧೦) ಶ್ರೀ ಬಿ. ಹೆಚ್. ವೆಂಕಾನಾಯಕ (ಹರಪನಹಳ್ಳಿ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಸಚಿವರು ದಯವಿಟ್ಟು ಉತ್ತರಿಸುವರೆ ?

ಹರಪನಹಳ್ಳಿಯಲ್ಲಿರುವ ಆಸ್ಪತ್ರೆಯನ್ನು ೫೦ ಹಾಸಿಗೆಯ ಆಸ್ಪತ್ರೆಯನ್ನಾಗಿ ಪುನರ್ವಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳು ಯಾವುವು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಬಳ್ಳಾರಿ ಜಿಲ್ಲೆ ಹರಪ್ಪನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ೧೮ ಹಾಸಿಗೆಗಳಿವೆ. ಸರ್ಕಾರದ ನೀತಿಯಂತೆ ತಾಲ್ಲೂಕು ಉಪ ವಿಭಾಗೀಯ ಕೇಂದ್ರ ಸ್ಥಳಗಳಲ್ಲಿರುವ ಆಸ್ಪತ್ರೆಗಳನ್ನು ೩೦—೫೦ ಹಾಸಿಗೆಗಳುಳ್ಳ ಆಸ್ಪತ್ರೆಗಳನ್ನಾಗಿ ಹಂತ ಹಂತವಾಗಿ ಪರಿವರ್ತಿಸಲಾಗುವುದು.

ಹರಪನಹಳ್ಳಿಯಲ್ಲಿರುವ ಆಸ್ಪತ್ರೆಯು ತಾಲ್ಲೂಕು ಕೇಂದ್ರವಲ್ಲಿರುವುದರಿಂದ ಅದನ್ನು ೩೦ ಹಾಸಿಗೆ ಗಳುಳ್ಳ ಆಸ್ಪತ್ರೆಯನ್ನಾಗಿ ಪರಿವರ್ತಿಸಬಹುದು. ಈ ಬಾಬ್ತಿಗೆ ಸುಮಾರು ೨೦ ಲಕ್ಷ ರೂ. ಗಳು ಬೇಕಾಗುತ್ತದೆ. ೧೯೮೫—೮೬ನೇ ಸಾಲಿನಲ್ಲಿ ಯೋಜನಾ ಕಡಿತದ ಪ್ರಯುಕ್ತ ಆಯವ್ಯಯ ಪಟ್ಟಿಯಲ್ಲಿ ಈಬಗ್ಗೆ ಹಣ ಒದಗಿಸಿಲ್ಲ. ಆದ್ದರಿಂದ ಈ ಆಸ್ಪತ್ರೆಯನ್ನು ೩೦ ಹಾಸಿಗೆಗಳುಳ್ಳ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಸಾಧ್ಯವಿಲ್ಲ. ರಾಜ್ಯದ ಹಣಕಾಸಿನ ಪರಿಸ್ಥಿತಿ ಸುಧಾರಿಸಿದಾಗ ಇದನ್ನು ಪರಿಶೀಲಿಸ ಲಾಗುವುದು.

ಕರ್ನಾಟಕವು ಬೇರೆ ರಾಜ್ಯಗಳಿಂದ ಅಕ್ಕಿಯನ್ನು ಖರೀದಿಸಿದ ಬಗ್ಗೆ

೨೮೬ (೧೨೦) ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕವು ಬೇರೆ ರಾಜ್ಯಗಳಿಂದ ೧೯೮೫ ನೇ ಇಸವಿ ಜನವರಿ ಒಂದನೇ ತಾರೀಖಿನಿಂದ ಜುಲೈ ಆಂತ್ಯದವರೆಗೆ ಖರೀದಿಸಿದ ಅಕ್ಕಿಯ ಪ್ರಮಾಣವೆಷ್ಟು ? (ರಾಜ್ಯ ವಾರು ಅಂಕಿ ಅಂಶಗಳನ್ನು ದಯವಿಟ್ಟು ತಿಳಿಸಬೇಕು)

ಆ) ಅದರ ಒಟ್ಟು ಖರ್ಚು ?

ಇ) ರಾಜ್ಯದಲ್ಲಿ ಅಕ್ಕಿಯ ಬೆಲೆಯನ್ನು ನಿಯಂತ್ರಿಸುವುದರಲ್ಲಿ ಸರ್ಕಾರವು ಸಫಲವಾಗಿಡೆಯೆ ?

ಶ್ರೀ ಜಿ, ಬಸವಣ್ಣಪ್ಪ.—(ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು)

ಅ) ಏರೀದಿಸಿಯೇ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ತಕ್ಕಮಟ್ಟಿಗೆ

ಸಿಬ್ಬಂದಿವರ್ಗದವರಿಗೆ ವಾಸದ ಮನೆಗಳನ್ನು ಕಟ್ಟಿಸುವ ಬಗ್ಗೆ

೨೮೭ (೨೨೦) ಶ್ರೀ ಶಂಕರಗೌಡ–(ಜೊಸಪೇಟೆ)ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ಸಿಬ್ಬಂದಿ ವರ್ಗದವರಿಗೆ ಕಟ್ಟಡವನ್ನು ಕಟ್ಟಲು ಉದ್ದೇಶಿಸಲಾಗಿದೆಯೆ .

ಆ) ಹಾಗಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ನಿರ್ಮಾಣವಾಗುತ್ತಿರುವ ಆಸ್ಪತ್ರೆಯ ಪೂರ್ವಭಾಗದಲ್ಲಿ ಜಖಿಮನನ್ನು ಸ್ವಾಧೀನ ಪಡಿಸಿಕೊಂಡಿದೆಯೆ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ರಾಜ್ಯ ಸಚಿವರು

ಆ) ಹೌದು

ಆ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಇಲ್ಲ.

ಧಾರವಾಡ ಜಿಲ್ಲೆಯಲ್ಲಿ ಆರೋಗ್ಯ ಘಟಕದ ಮಂಜೂರಾತಿ ಬಗ್ಗೆ

೨೮೮ (೨೧೧) ಶ್ರೀ ಎಂ. ಎಂ. ನಡಾಫ್(ಶಿಗ್ಗಾಂವಿ) ಈ ಕೆಳಕಂಡಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಹೋತನಹಳ್ಳಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡಲು ಮನವಿಯು ಸರ್ಕಾರಕ್ಕೆ ಬಂದಿರುತ್ತದೆಯೆ ?

ಆ) ಜಿಲ್ಲಾಧಿಕಾರಿಗಳು ಮತ್ತು ರಾಜ್ಯ ಮಟ್ಟದ ಅಧಿಕಾರಿಗಳಿಂದಲೂ ಈ ಮನವಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡಲ್ಪಟ್ಟಿದ್ದು ನಿಜವೇ ?

ಇ) ಹಾಗಿದ್ದಲ್ಲಿ ಸರ್ಕಾರವು ಈ ದಿಶೆಯಲ್ಲಿ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು

ಅ) ಹೌದು

ಆ) ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ.

ಇ) ಈ ಮನವಿಯನ್ನು ಇತರ ಇಂತಹ ಮನವಿಗಳೊಂದಿಗೆ ಸರಕಾರದ ಪರಿಶೀಲನೆಯಲ್ಲಿದೆ.

ಹಂಬ್ಬಳ್ಳಿಯಲ್ಲಿ ಕೆ. ಎಂ. ಸಿ. ಯಲ್ಲಿ ಇರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

೨೮೯ (೨೦೯) ಶ್ರೀ ನಡಾಫ್ (ಶಿಗ್ಗಾಂವಿ)ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟುಉತ್ತರಿಸುವರೆ ?